










ದೊಡ್ಡ ಪ್ರಮಾಣದ ಬೆಂಬಲ ವ್ಯಕ್ತವಾಯಿತು. ಮಹಾಭಾರತದ ಜೊತೆಗೆ 'ಸ್ಟಾರ್' ವಾಹಿನಿಯಲ್ಲಿ ಪ್ರಸಾರವಾಗುವ ಜನಪ್ರಿಯ ಧಾರಾವಾಹಿಗಳನ್ನೂ ಡಬ್ ಮಾಡಿ ಎನ್ನುವ ಬೇಡಿಕೆ ವೀಕ್ಷಕವಲಯದಿಂದ ವ್ಯಕ್ತವಾಗಿದೆ. ಈ ಪ್ರತಿಕ್ರಿಯೆಗಳಿಂದ ಉತ್ತೇಜಿತವಾಗಿರುವ ವಾಹಿನಿ, ಹಿಂದಿಯ 'ನಜರ್' ಧಾರಾವಾಹಿಯನ್ನು 'ದೃಷ್ಟಿ' ಹೆಸರಿನಲ್ಲಿ ಡಬ್ಬಿಂಗ್ ಮಾಡುವ ಬಗ್ಗೆ ಯೋಚಿಸುತ್ತಿದೆ ಎಂದು ವಾಹಿನಿಯ ಮೂಲಗಳು 'ಸುಧಾ'ಕ್ಕೆ ತಿಳಿಸಿವೆ.

ಪ್ರಸ್ತುತ ಡಬ್ಬಿಂಗ್ ಧಾರಾವಾಹಿಗಳಿಗೆ ದೊರೆತಿರುವ ಉತ್ತೇಜನ ಲಾಕ್‌ಡೌನ್ ಸಂಪೂರ್ಣ ಸಡಿಲಿಕೆ ಆದ ನಂತರವೂ ದೊರೆಯಲಿದೆ ಎನ್ನುವ ಬಗ್ಗೆ ವಾಹಿನಿಗೆ ಸಂಪೂರ್ಣ ವಿಶ್ವಾಸವಿಲ್ಲ. 'ಕನ್ನಡ ವೀಕ್ಷಕರು ಜಾಣರಿದ್ದಾರೆ' ಎನ್ನುವ ವಾಹಿನಿಯ ಮೂಲಗಳು, ಡಬ್ಬಿಂಗ್ ಕಂಟೆಂಟ್‌ನ ಜನಪ್ರಿಯತೆಯ ನಡುವೆಯೂ ಲಾಕ್‌ಡೌನ್ ಸಂಪೂರ್ಣ ತೆರವಾದ ನಂತರ ತನ್ನೆಲ್ಲಾ ಧಾರಾವಾಹಿಗಳನ್ನು ಮುಂದುವರಿಸುವ ಯೋಚನೆಯಲ್ಲಿದೆ.

ಡಬ್ಬಿಂಗ್ ಬಗ್ಗೆ ಕಲರ್ಸ್ ವಾಹಿನಿಯ ಪರಮೇಶ್ವರ ಗುಂಡ್ಕಲ್ ಅವರು ಆಡುವ ಮಾತುಗಳು ವಾಹಿನಿಗಳಿಗೆ ಡಬ್ಬಿಂಗ್ ಅನಿವಾರ್ಯವಾಗಿರುವುದನ್ನು ಸೂಚಿಸುವಂತಿವೆ. 'ವೈಯಕ್ತಿಕವಾಗಿ ನನಗೆ ಡಬ್ಬಿಂಗ್ ಕಲೆಯಾಗಿ ಖುಷಿ ಕೊಡುವುದಿಲ್ಲ. ಯಾವುದೇ ಕಥೆಯನ್ನು ನಾನು ಮೂಲಭಾಷೆಯಲ್ಲಿಯೇ ನೋಡುತ್ತೇನೆ. ಆದರೆ, ಡಬ್ಬಿಂಗ್ ಮಾಡುವುದನ್ನು ತಪ್ಪೆಂದು ಹೇಳಲಾಗುವುದಿಲ್ಲ. ಜನ ತುಂಬಾ ಬುದ್ಧಿವಂತರಿದ್ದಾರೆ. ಅವರಿಗೆ ಇಷ್ಟವಾಗಿದ್ದನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ನಮ್ಮ ವಾಹಿನಿ ಈವರೆಗೆ ಡಬ್ಬಿಂಗ್ ಮಾಡಿಲ್ಲವಾದರೂ, ಮುಂದೆ ಮಾಡುವ ಸಾಧ್ಯತೆಯಿದೆ' ಎನ್ನುವ ಗುಂಡ್ಕಲ್‌ರ ಮಾತುಗಳನ್ನು ಗಮನಿಸಿದರೆ, ಕಲರ್ಸ್ ವಾಹಿನಿ ಕೂಡ ಡಬ್ಬಿಂಗ್‌ಗೆ ತನ್ನನ್ನು ತೆರೆದುಕೊಳ್ಳುತ್ತಿರುವಂತೆ ಕಾಣಿಸುತ್ತಿದೆ. ಈ ಹಿಂದೆ ಹಿಂದಿಯಲ್ಲಿ ಯಶಸ್ಸು ಗಳಿಸಿದ್ದ 'ಶನಿ' ಧಾರಾವಾಹಿಯನ್ನು ಕಲರ್ಸ್ ವಾಹಿನಿ ಕನ್ನಡದಲ್ಲಿ ಪುನರ್ ನಿರ್ಮಿಸಿತ್ತು. ಈಗಾಗಿದ್ದರೆ ಹಿಂದಿ ಶನಿಯ ದರ್ಶನಭಾಗ್ಯವನ್ನೇ ಕನ್ನಡಿಗರು ಪಡೆಯಬೇಕಿತ್ತೆನ್ನಿಸುತ್ತದೆ.

ಲಾಕ್‌ಡೌನ್‌ಗೆ ಮೊದಲು ಪ್ರಸಾರವಾಗುತ್ತಿದ್ದ ಅನೇಕ ಧಾರಾವಾಹಿಗಳು ನಿಂತುಹೋಗುತ್ತಿವೆಯಲ್ಲ; ಆ ಸ್ಥಾನವನ್ನು ಯಾವ ಕಾರ್ಯಕ್ರಮಗಳು ತುಂಬುತ್ತವೆ? 'ಆ ಸ್ಥಾನವನ್ನು ಡಬ್ಬಿಂಗ್ ಕಂಟೆಂಟ್ ತುಂಬಬಹುದು. ಕೆಲವು ವಾಹಿನಿಗಳು ತಮ್ಮ ಸಂಗ್ರಹದಲ್ಲಿನ ಹಳೆಯ ಧಾರಾವಾಹಿಗಳನ್ನು ಮರು ಪ್ರಸಾರ ಮಾಡಲೂಬಹುದು. ಲೆಕ್ಕಾಚಾರ ಹೀಗೇ ಆಗುತ್ತದೆ ಎಂದು ಹೇಳುವುದು ಸಾಧ್ಯವಿಲ್ಲ' ಎನ್ನುತ್ತಾರೆ ಸುರೇಶ್. ಡಬ್ಬಿಂಗ್ ಪ್ರವಾಹದ ಸ್ಪಷ್ಟ ಸೂಚನೆಯ ನಂತರವೂ ಅವರಲ್ಲೊಂದು ಪ್ರಶ್ನೆ ಉಳಿದೇ ಇದೆ. ಡಬ್ಬಿಂಗ್ ಕಂಟೆಂಟ್ ಮುನ್ನೆಲೆಗೆ ಬಂದರೆ, ಬೆಳಗಿನಿಂದ ಸಂಜೆಯವರೆಗೆ ಡಬ್ಬಿಂಗ್ ಸರಕನ್ನೇ ಪ್ರಸಾರ ಮಾಡುವ ಪರಿಸ್ಥಿತಿ ಉಳಿಯಲಿದೆಯೇ? ಹಾಗೆ ಪ್ರಸಾರವಾದರೆ ಜನ ನೋಡುತ್ತಾರಾ ಎನ್ನುವ ಪ್ರಶ್ನೆಯದು. ಅವರ ಜಿಜ್ಞಾಸೆಯನ್ನು, ಡಬ್ಬಿಂಗ್‌ನಿಂದಾಗಿ ಸ್ಪರ್ಧಾತ್ಮಕ ವಾತಾವರಣ ರೂಪುಗೊಂಡಲ್ಲಿ, ಆ ಸ್ಪರ್ಧೆಯಲ್ಲಿ ಗುಣಮಟ್ಟದ ಕಾರ್ಯಕ್ರಮಗಳು ರೂಪುಗೊಳ್ಳಬಹುದೇನೊ ಎಂದು ಅರ್ಥ ಮಾಡಿಕೊಳ್ಳಬಹುದೆ?

ನಿರ್ಬಂಧಗಳು ಇದ್ದಾಗ ಕ್ರಿಯಾಶೀಲ ಮನಸ್ಸು ಅದ್ಭುತವಾಗಿ ಕೆಲಸ ಮಾಡುತ್ತದೆ ಎನ್ನುವ ಪರಮೇಶ್ವರ ಗುಂಡ್ಕಲ್, ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ನಿರ್ಬಂಧವಿರುವ ಇರಾನ್‌ನಲ್ಲಿ ಅತ್ಯುತ್ತಮವಾದ ಸಿನಿಮಾಗಳು ರೂಪುಗೊಳ್ಳುವುದನ್ನು ನೆನಪಿಸುತ್ತಾರೆ. ಬಹುಶಃ, ಪ್ರಸಕ್ತ ಬಿಕ್ಕಟ್ಟಿನ ಸಂದರ್ಭ ಕನ್ನಡ ಕಿರುತೆರೆಯಲ್ಲಿ ಹೊಸ ಮನ್ವಂತರಕ್ಕೆ ನಾಂದಿ ಹಾಡಬಹುದೇನೊ? 'ಮರಳಿ ಬಾ ಮನ್ವಂತರವೇ' ಎನ್ನುವುದೀಗ ಕರ್ನಾಟಕದ ಮನೆ ಮನೆ ಪ್ರೇಕ್ಷಕರ ಹೃದಯಗೀತೆ. ಒಂದೆಡೆ ಕೊರೊನಾ ಕಾರಣದಿಂದಾಗಿ ಉಂಟಾಗಿರುವ ಆರ್ಥಿಕ ಹಿಂಜರಿತ, ಇನ್ನೊಂದೆಡೆ ಡಬ್ಬಿಂಗ್ ಸವಾಲು. ಈ ಸವಾಲನ್ನು ಸಮರ್ಥವಾಗಿ ಎದುರಿಸುವುದು ಸಾಧ್ಯವಾದಲ್ಲಿ ಕನ್ನಡ ಕಿರುತೆರೆ ಹೊಸತೊಂದು ಜಿಗಿತ ಕಾಣಬಹುದೇನೊ?

ಪ್ರತಿಕ್ರಿಯಿಸಿ: feedback@sudha.co.in